ಕೋಮಲವಲ್ಲಿಯ ಕನಸುಗಳು...!



ನಟಿಸಿದ 140 ಚಿತ್ರಗಳಲ್ಲಿ 120 ಚಿತ್ರಗಳು ಸೂಪರ್‌ಹಿಟ್ ಎನ್ನಿಸಿಕೊಂಡದ್ದು ಜಯಲಲಿತಾ ಅವರ ಚಿತ್ರರಂಗದ ಜನಪ್ರಿಯತೆ ಸಾಕ್ಷಿ. ಆ ಕಾಲದಲ್ಲಿ ಇದೇ ಭಾರತದಲ್ಲೇ ಅತ್ಯಧಿಕ ಸಂಭಾವನೆ ಪಡೆಯುತ್ತಿದ್ದ ನಟಿಯಾಗಿದ್ದರು ಜಯಲಲಿತಾ.

■ ಎನ್.ಜಗನ್ನಾಥ ಪ್ರಕಾಶ್

ಚಿತ್ರಗಳು: ಪ್ರತಿ ಅಶ್ವಥ್‌ನಾರಾಯಣ್ / ಭವಾನಿ ಲಕ್ಷ್ಮೀನಾರಾಯಣ್

ವಿನ್ಯಾಸ: ದಿಲ್

ಚೆಂದುಳ್ಳಿ ಚೆಲುವೆಯಾಗಿ ಚಿತ್ರಜಗತ್ತಿನಲ್ಲಿ ವಿಜಯದ ನಗೆ ಬೀರಿ, ರಾಜಕೀಯ ಏರುಪೇರುಗಳ ನಡುವೆಯೂ ಚಾಣಾಕ್ಷೆ ಎನ್ನಿಸಿಕೊಂಡ ಜಯಲಲಿತಾ ಅವರು ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಜನನಾಯಕಿ. ಬದುಕಿನಲ್ಲಿ ಘಟಿಸಿದ ಆಕಸ್ಮಿಕಗಳನ್ನೇ ಗೆಲುವಿನ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಂಡು ಏಕಾಂಗಿಯಾಗಿಯೇ ಅಂದುಕೊಂಡಿದ್ದನ್ನು ಸಾಧಿಸಿ ತೋರಿದ ತಮಿಳಿನಾಡಿನ ಅಮ್ಮ ಜಯಲಲಿತಾ. ಜೆ.

ರಾಜಕಾರಣದಲ್ಲಿ ಏಳುಬೀಳುಗಳನ್ನು ಜಯಲಲಿತಾ ಕಂಡಿರಬಹುದಾದರೂ ಚಲನಚಿತ್ರರಂಗದಲ್ಲಂತೂ ಆಕೆಯ ಯಶಸ್ಸಿನ ಅಲೆಗಳನ್ನು ತಡೆಯುವವರೇ ಇರಲಿಲ್ಲ. ವಾಸ್ತವವಾಗಿ ಚಿತ್ರರಂಗಕ್ಕೆ ಜಯಲಲಿತಾ ಬಂದಿದ್ದೇ ಆಕಸ್ಮಿಕ.

'ಶ್ರೀಶೈಲ ಮಹಾತ್ಮೆ' ಕನ್ನಡ ಚಿತ್ರದಲ್ಲಿ ಪುಟ್ಟ ಪಾತ್ರವೊಂದನ್ನು ನಿರ್ವಹಿಸಿದ್ದ ಜಯಲಲಿತಾ, ನಾಲ್ಕು ಬಗೆಯ ನೃತ್ಯ ಶೈಲಿಗಳ ಪರಿಣಿತೆ. ಓದಿನಲ್ಲೂ ಮುಂದೆ. ರಾಜ್ಯಕ್ಕೆ ಮೊದಲ ಸ್ಥಾನಗಳಿಸಿ ವಿದ್ಯಾರ್ಥಿ ವೇತನವನ್ನು ತಮ್ಮದಾಗಿಸಿಕೊಂಡ ಜಯಲಲಿತಾ ಕಾನೂನು ಪದವಿಗೂ ಕಾಲಿಟ್ಟಿದ್ದರು.

ಭಾರತದ ರಾಷ್ಟ್ರಪತಿಗಳಾದ ವಿ.ವಿ. ಗಿರಿ ಅವರ ಮಗ ಶಂಕರ್ ಗಿರಿ ಅವರು ತಯಾರಿಸಿದ ಇಂಗ್ಲಿಷ್ ಸಿನಿಮಾದಲ್ಲಿ ಜಯಲಲಿತಾ ಪೂರ್ಣ ಪ್ರಮಾಣದ ನಾಯಕಿ ಆಗಿದ್ದರು. ಆದರೆ ಆ ಚಿತ್ರ ಸದ್ದು ಸುದ್ದಿ ಮಾಡಿದ ಮಾಹಿತಿಗಳು